# ಗುರುತು

ದಸ್ತಗೀರ್‌ನಿಂದ ಹಿಡಿದು ದ್ಯಾಮಪ್ಪ–ದುರುಗಪ್ಪ, ನಾಗವ್ವನಿಂದ ಹಿಡಿದು ನಸೀಮಾ–ನಾಗರತ್ನ, ಮಹಾವೀರನಿಂದ ಹಿಡಿದು ಮಲ್ಲಪ್ಪ–ಮುದುಕಪ್ಪ, ಮಾದೇವಿಯಿಂದ ಹಿಡಿದು ಮಲ್ಲವ್ವ–ಮಾಳವ್ವ, ಸಣ್ಣಪ್ಪನಿಂದ ಹಿಡಿದು ಸೊಟ್ಟಪ್ಪ–ಸೋಮಪ್ಪ, ಸುನಂದಾಳಿಂದ ಹಿಡಿದು ಸುಮ್ಮವ್ವ–ಸುಶೀಲವ್ವ, ಯಲ್ಲಪ್ಪನಿಂದ ಹಿಡಿದು ಯಶವಂತ, ಯದುವೀರ ಹೀಗೆ ಅವನೂ ಅವಳೂ ಇವನೂ ಇವಳೂ ಹಿರಿಯರೂ ಕಿರಿಯರೂ ಒಟ್ಟಿನಲ್ಲಿ ಊರಿನವರೆಲ್ಲರೂ ಪುಂಡಲೀಕ ಮಾಸ್ತರ್ ಹೇಳಿಕೊಟ್ಟ ಆಟದಿಂದ ಪುಳಕಿತರಾಗಿದ್ದರು. ಪುಳಕಿತರಾದ ಮಂದಿಗಿಂತ ಚಿಂತೆ ಮಾಡುತ್ತಿದ್ದ ಮಂದಿಯೇ ಜಾಸ್ತಿಯಿದ್ದರು. ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲಿ ಎಂಬಂತೆ ಕೆಲವರು ಪುಂಡಲೀಕ ಈ ಊರಿಗೆ ಮಾಸ್ತರನಾಗಿ ಬಂದಿದ್ದನ್ನು ಹಳಿಯತೊಡಗಿದ್ದರು. ಇದೊಂದು ಸರಳ ಆಟವೋ, ಇಲ್ಲಾ ಜಟಿಲ ಪಾಠವೋ–ಒಟ್ಟಿನಲ್ಲಿ ಆಟದ ಕರಾಮತ್ತು ಊರನ್ನು ಬಿಟ್ಟೂಬಿಡದೆ ವ್ಯಾಪಿಸಿತ್ತು. ಬೆಳೆದುನಿಂತ ಹುಡುಗರನ್ನು ಕಾಯುವುದು ಮನೆಮಂದಿಗೆ ಬೇಜಾನ್ ಕಷ್ಟವಾಗತೊಡಗಿತು. ಯಾಕೆಂದರೆ ಅವರ ಕನಸಿನಲ್ಲಿ ಈ ಆಟ ಪದೇಪದೇ ಬರತೊಡಗಿ ಅದನ್ನವರು ಆಗಾಗ ಕನವರಿಸತೊಡಗಿದರು. ಪುಂಡ ಮಾಸ್ತರನೊಬ್ಬ ಯಾವುದೋ ವಿನೋದಕ್ಕಾಗಿ ಹೇಳಿಕೊಟ್ಟ ಜುಜುಬಿ ಆಟಕ್ಕೆ ಜನ ಇಷ್ಟೇಕೆ ತಲೆ ಕೆಡಿಸಿಕೊಳ್ಳುತ್ತಾರೆಂದು ಕೆಲವರು ಅದನ್ನು ಅಸಡ್ಡೆ ಮಾಡಿದರು. ಆಟವೇನೋ ತುಂಬ ಸರಳವಾಗಿರುವಂತೆ ತೋರುತ್ತಿತ್ತು. ಆದರೆ ಅದರಲ್ಲಿ ಆಟದ ಜಾಣ್ಮೆಗಿಂತ ಹೆಚ್ಚಿಗೇನೋ ಇದೆಯೆನ್ನುವ ವಾಸನೆ ಕೆಲವು ತೀಕ್ಷ್ಣ ಮೂಗುಗಳಿಗೆ ಬಡಿಯದೇ ಇರಲಿಲ್ಲ.



**ಬಸು ಬೇವಿನಗಿಡದ**

ಹೆಂಗಸರು ಗುಂಪುಗೂಡಿದಾಗ ಮುಸಿಮುಸಿ ನಕ್ಕರು. ಮಾತಿನ ನಡುನಡುವೆ ಅವರು ಕಿಲಕಿಲ ನಗುತ್ತಿದ್ದುದರಿಂದ ಆ ಮಾತುಗಳ ತಲೆಬುಡ ತಿಳಿಯುತ್ತಿರಲಿಲ್ಲ. ತೀರ ಕಿವಿಗೊಟ್ಟು ಕೇಳಿದರೆ ಅಲ್ಪ ಸ್ವಲ್ಪ ತಿಳಿಯುತ್ತಿತ್ತು. ಅವರು ಅವನ ಬಗ್ಗೆ ಹರಟೆ ಕೊಚ್ಚುತ್ತಿರುವರೋ? ಸುಮ್ಮನೆ ಮಾತಾಡುತ್ತಿರುವರೋ ಇಲ್ಲಾ ಯಾವುದಾದರೂ ವಿಷಯಕ್ಕೆ ಸಂಬಂಧಪಟ್ಟಂತೆ ದೂರು ಹೇಳುತ್ತಿರುವರೋ? ಅಬ್ಬಾ! ಅಲ್ಲಿ ಹೊಮ್ಮುತ್ತಿದ್ದ ಥರಾವರಿ ನಗುವಿನ ಝುರಿಗಳಾದರೂ ಎಂಥವು! ಅವು ಒಮ್ಮೊಮ್ಮೆ ಸೊಕ್ಕಿ ಹರಿಯುತ್ತಿದ್ದವು. ಮತ್ತೊಮ್ಮೆ ಪುಟ್ಟಪೂರ ಬತ್ತುತ್ತಿದ್ದವು. ಖೊಳ್, ಹುಂಯ್, ಹಂಹಂಹ, ಕೀಕೀ, ಕುಕ್, ಖಿಸ್, ಸಿಸ್ ಮನುಷ್ಯರು ಇಷ್ಟೊಂದು ರೀತಿಯಲ್ಲಿ ನಗಬಹುದೇ? ಹಾಗೂ ನಕ್ಕಾಗ ಇಷ್ಟೊಂದು ಅರ್ಥಗಳು ಬರುತ್ತವೆಯೇ? ಅವರು ಬಾಯ್ತುಂಬ ನಕ್ಕಾಗಿನ ಶಬ್ದ ಒಂದು ರೀತಿಯಿರುತ್ತಿದ್ದರೆ, ನಗಲೋಬೇಡವೋ ಎಂಬಂತೆ ಬಾಯಿ ಹಿಡಿದು